# ಪದಗಳಿಗೆ ಸ್ಪಂದಿಸುವ ಬಗೆ

ಪದಗಳಿಗೆ, ನುಡಿಗಟ್ಟುಗಳಿಗೆ ಸ್ಪಂದಿಸುವುದು ಹೇಗೆ ಎಂಬುದೇ ಒಂದು ಅತಿಸೂಕ್ಷ್ಮವಾದ ಸಂಗತಿಯಾಗಿದೆ. ಅದರಲ್ಲೂ ಆಧ್ಯಾತ್ಮಿಕ ವಾಙ್ಮಯಗಳಲ್ಲಿ ಉಪನಿಷತ್ತು ಮುಂತಾದವುಗಳಲ್ಲಿ– ಬಳಕೆಯಾದ ಪದಗಳಿಗೆ ಸರಿಯಾಗಿ ಸ್ಪಂದಿಸುವುದು ಸಾಧ್ಯವಾದರೆ ಅನುಭಾವದ ಹಾದಿಯೊಂದು ಸಿಕ್ಕಿದಂತೆಯೇ ಸರಿ. ಉದಾಹರಣೆಗೆ ಈ ಬದುಕಿನಲ್ಲಿ ಒಂದು ದೊಡ್ಡ ರಹಸ್ಯವಿದೆ ಎನ್ನುತ್ತದೆ ಉಪನಿಷತ್ತು. ಸತ್ಯವು ಇಲ್ಲಿ ಅಡಗಿದೆ, ನಿಗೂಢವಾಗಿದೆ ಎನ್ನುತ್ತದೆ. ಸತ್ಯವು ಪ್ರತ್ಯಕ್ಷ ಪ್ರಿಯವಾದುದಲ್ಲ, ಪರೋಕ್ಷ ಪ್ರಿಯವಾದುದು ಎನ್ನುತ್ತದೆ. ತತ್ವಂ ನಿಹಿತಂ ಗುಹಾಯಾಂ ಎನ್ನುತ್ತದೆ. ತತ್ವವು ಗುಹೆಯೊಳಗಡೆ ಅಗೋಚರವಾಗಿ ಅಡಗಿದಂತಿದೆ ಎನ್ನುತ್ತದೆ. ಅದಿರಲಿ.

ಇಲ್ಲೊಂದು ರಹಸ್ಯವಿದೆ ಎನ್ನುವ ಮಾತಿಗೆ ಹೇಗೆ ಸ್ಪಂದಿಸುತ್ತೀರಿ? ಎರಡು ಬಗೆಗಳಲ್ಲಿ ಸ್ಪಂದಿಸಬಹುದು. ಮೊದಲನೆಯದು ಇಲ್ಲೊಂದು ರಹಸ್ಯವಿದೆ ಎಂದಾಗ ಆ ರಹಸ್ಯವನ್ನು ನಾವು ಒಡೆಯಬೇಕು, ಒಡೆಯಬಲ್ಲೆವು ಎಂಬ ರೀತಿಯ ಪ್ರತಿಸ್ಪಂದನ. ರಹಸ್ಯವಿದೆ ಎಂದಾಗ ಯೋಚಿಸಬಲ್ಲ ಮನುಷ್ಯಬುದ್ಧಿಗೆ ಇದೊಂದು ಪಂಥಾಹ್ವಾನವಾಗಿದೆ; ಸವಾಲಾಗಿದೆ ಎಂಬ ಗ್ರಹಿಕೆ. ಆದುದರಿಂದ ಇವತ್ತಲ್ಲ ನಾಳೆ ಆ ರಹಸ್ಯವನ್ನು ಒಡೆದು ಬಿಡುವೆವು, ರಹಸ್ಯವನ್ನು ರಹಸ್ಯವಾಗಿಯೇ ಇಟ್ಟುಕೊಳ್ಳುವುದು ಅಜ್ಞಾನವನ್ನು ಕಾಪಾಡಿಕೊಂಡು ಬರುವ ಮೂರ್ಖತನವೇ ಸರಿ ಎಂಬ ಗ್ರಹಿಕೆ. ವಿಜ್ಞಾನದ ಮುಖದಲ್ಲಿ ನೋಡಿದರೆ ತಿಳಿಯುವುದಿಲ್ಲವೆ? ನಾವು ಪ್ರಕೃತಿಯ ಎಷ್ಟು ರಹಸ್ಯಗಳನ್ನು ಒಡೆದಿಲ್ಲ? ನಾಗರಿಕತೆ, ತಂತ್ರಜ್ಞಾನ ಈ ಮಟ್ಟಕ್ಕೆ ಬೆಳೆಯಬೇಕಾದರೆ ಅದು ರಹಸ್ಯವನ್ನು ಕಾಪಾಡಿಕೊಂಡು ಬರುವ ಧೋರಣೆಯಿಂದ ಅಲ್ಲ, ರಹಸ್ಯವನ್ನು ಒಂದು ಸವಾಲೆಂದು ಸ್ವೀಕರಿಸಿ, ಅದನ್ನು ಒಡೆದುದರಿಂದ ತಾನೇ ಸಾಧ್ಯವಾದುದು? ಇದು ನಮ್ಮ ಅನುಭವದ ಸತ್ಯವಾಗಿದೆಯಲ್ಲವೆ? ಅಲ್ಲದೆ, ಆಧ್ಯಾತ್ಮಿಕತೆಯು ರಹಸ್ಯಮಯವೆಂಬ ನಿಲುವು  ಅದು ರಹಸ್ಯವಾದುದರಿಂದ ಪೂಜ್ಯವೂ ಆಗಿದೆ ಎಂಬ ನಿಲುವು– ಸಾಮಾಜಿಕವಾಗಿ ಮನುಷ್ಯ ಸಂದರ್ಭಗಳಲ್ಲಿ ಉಂಟಾಗಿರುವ ಅಸ್ಪೃಶ್ಯತೆಯಂಥ ಕ್ರೌರ್ಯವನ್ನು ಕೂಡ ನಿವಾರಿಸಲು ಯತ್ನಿಸದೆ ಯಥಾಸ್ಥಿತಿಯನ್ನೇ ಮುಂದುವರಿಸುವುದಕ್ಕೆ ನೆರವಾಗಿರುವ ವಿದ್ಯಮಾನವಾಗಿರುವುದನ್ನು ನೋಡಿದ್ದೇವೆ. ಆದುದರಿಂದ ರಹಸ್ಯವಿದೆ ಎಂದಾಗ ಈ ನಿಲುವನ್ನು ಸವಾಲಾಗಿ ಸ್ವೀಕರಿಸುವ ಸ್ಪಂದನವೇ ಸಹಜವೂ ಸರಿಯೂ ಆದದ್ದು ಎಂಬ ನಿಲುವು.

ಇವೆಲ್ಲವೂ ನಿಜ. ಅಲ್ಲಗಳೆಯಲಾಗದ ನಿಜ. ಅಲ್ಲಗಳೆಯಬಾರದ ನಿಜ. ಆದರೆ ಉಪನಿಷತ್ತು ಇಲ್ಲೊಂದು ರಹಸ್ಯವಿದೆ ಎಂದಾಗ, ಈ ಒಡೆಯುವ ದಾರಿಗಿಂತ ಬೇರೆಯಾದ, ಇನ್ನೊಂದು ದಾರಿಯನ್ನು ತೆರೆಯುವ ಮಾತು ಅದು ಎನ್ನುವುದು ಕೂಡ ಅಷ್ಟೇನಿಜ. ರಹಸ್ಯವೆಂದಾಗ, ಅದು ತನ್ನನ್ನು ಅನುಭವಿಸು ಎಂದು ಪಿಸುನಡಿಯುತ್ತಿದೆ. ನೀನು, ರಹಸ್ಯವನ್ನು ಅನುಭವಿಸಬಲ್ಲೆ, ಅದೊಂದು ವಿಶಿಷ್ಟವಾದ ಸಾಮರ್ಥ್ಯ ಎನ್ನುತ್ತಿದೆ. ಈಗ ನೀನು, ಪ್ರತ್ಯಕ್ಷಕ್ಕೆ ಪರವಾಗಿರುವೆ ಅಂದರೆ ಕಾಣುವುದು– ಸತ್ಯ, ಕಾಣುವುದು ಮಾತ್ರ ಸತ್ಯ ಎಂದುಕೊಂಡಿರುವೆ, ಕಾಣದಿರುವುದು ಸತ್ಯವಲ್ಲ ಎಂದು ತಿಳಿದಿರುವೆ.  ಈ ತಿಳುವಳಿಕೆಗಿಂತ ಬೇರೆಯಾಗಿ, ಕಾಣದಿರುವುದು, ಪರೋಕ್ಷವಾಗಿರುವುದು ಇದೆ, ಅದು ಕೂಡ ಸತ್ಯ, ಆ ಸತ್ಯವನ್ನು ತಿಳಿಯಬೇಕಾದರೆ, ಅದು ಕಣ್ಣುಮುಚ್ಚಿಯೇ ತಿಳಿಯಬೇಕಾದ್ದು, ತನ್ನಲ್ಲಿಯೇ ರಹಸ್ಯವನ್ನು ಅನುಭವಿಸಬೇಕಾದ್ದು ಆದುದರಿಂದ ರಹಸ್ಯವನ್ನು ಅನುಭವಿಸು ಎನ್ನುತ್ತಿದೆ. ಅನುಭವದ ದಾರಿಯು ವಿಶ್ಲೇಷಣೆಯ ದಾರಿಗಿಂತ ಬೇರೆಯಾದ್ದು. ಇದು ಬೇರೆಯದೇ ಆದ ಸ್ಪಂದನ! ಅನುಭವದಲ್ಲಿ ಮನುಷ್ಯ ಬದಲಾಗುವನು. ಅವನ ವ್ಯಕ್ತಿತ್ವವೇ ಪಲ್ಲಟವಾಗುವುದು. ತನಗೆ ಇದುವರೆಗೆ ತಿಳಿಯದ ತನ್ನದೇ ಸತ್ಯವನ್ನು ಅನುಭವಿಸಿದಾಗ ಮನುಷ್ಯ ಜೀವ ಬದಲಾಗಲೇ ಬೇಕಷ್ಟೇ.

ರಹಸ್ಯವನ್ನು ಒಡೆಯುವ ವಿಜ್ಞಾನದ ದಾರಿಯು ಮನುಷ್ಯನ ಆಂತರಿಕ ಸನ್ನಿವೇಶವನ್ನು ಎಷ್ಟು ಮಟ್ಟಿಗೆ ಬದಲಿಸುತ್ತದೆ ಎನ್ನುವುದು ಸಂದೇಹಾಸ್ಪದ. ನಾಗರಿಕರಿಗೆ ಸುಖಸಾಧನಗಳನ್ನು ಒದಗಿಸುವ ದಿಸೆಯಲ್ಲಿ ವಿಜ್ಞಾನಿಯು ದುಡಿಯುವನು ಎಂದುಕೊಳ್ಳೋಣ. ಇದನ್ನು ಸಾಧಿಸುವಲ್ಲಿ, ತನ್ನ ಪ್ರಯೋಗ ಶಾಲೆಯಲ್ಲಿ, ಏಕಾಂಗಿಯಾಗಿ, ಅದುವರೆಗಿನ ಲಬ್ಧ ಮಾಹಿತಿಗಳೊಡನೆ ತನ್ನ ಮನೋಬುದ್ಧಿಗಳು ಆಳವಾಗಿ ಒಡನಾಡುತ್ತ, ಪ್ರಯೋಗಗಳನ್ನು ನಡೆಸುತ್ತ, ಈ ವಿಷಯವನ್ನು ಕುರಿತು ತದೇಕವಾಗಿ ಚಿಂತಿಸುತ್ತ, ಇದ್ದಕಿದ್ದಂತೆ ಹೊಳೆವ ಹೊಳಹುಗಳಿಗೆ ತೆರೆದುಕೊಳ್ಳುತ್ತ, ಹೊಸ ಎಚ್ಚರವನ್ನು ವಿಜ್ಞಾನಿಯು ತಾನು ರೋಮಾಂಚನಗೊಂಡು ಅನುಭವಿಸುವನು. ತನ್ನೊಳಗಿನ ಈ ಆಂತರಿಕ ಸನ್ನಿವೇಶದಲ್ಲಿ, ನಿಜವಾದ ಸಂತೋಷವನ್ನು ನಿಜವಾದ ಸುಖವನ್ನು ವಿಜ್ಞಾನಿಯು ಅನುಭವಿಸುವನು. ಆದರೆ, ವಿಚಿತ್ರವೆಂದರೆ ಜಡವಾದ ಸುಖಸಾಧನವೊಂದನ್ನು ಜನರಿಗೆ ತಲಪಿಸುವ ಪ್ರಯಾಸದಲ್ಲಿ ಅವನು ತೊಡಗಿರುವನು! ಈ ಪ್ರಯಾಸದಲ್ಲಿ ತಾನು ಪಟ್ಟ ಸಂತೋಷವನ್ನು ಮಾತ್ರ ಅವನು ಜನರಿಗೆ ತಲಪಿಸಲಾರ! ತನ್ನಂತೆಯೇ ದುಡಿವ ಮತ್ತೋರ್ವ ವಿಜ್ಞಾನಿಯೊಂದಿಗೆ ಮಾತ್ರ ಈ ಅನುಭವವನ್ನು ಹಂಚಿಕೊಳ್ಳಬಲ್ಲನಷ್ಟೇ. ಸುಖದಲ್ಲಿಯೂ ವಸ್ತುಗಳಿಂದ ಸಿಗತಕ್ಕ ಸುಖದ ಬಗೆಯೊಂದು, ಆಂತರಿಕವಾಗಿ ಅನುಭವಿಸುವ ಸುಖದ ಬಗೆ ಇನ್ನೊಂದು ಎಂದು ಸುಖದ ಇಬ್ಬಗೆಗಳನ್ನು ಜಡಸುಖ ಮತ್ತು ಚೈತನ್ಯಾತ್ಮಕ ಸುಖ ಎಂಬ ಇಬ್ಬಗೆಗಳನ್ನು ಅನುಭವಿಸಿ ಚಕಿತನಾಗುವನು. ಜಡ ಸುಖದಾಯಕ ವಸ್ತುಗಳನ್ನು ಉತ್ಪಾದಿಸಬಹುದು. ಚೈತನ್ಯದ ಸುಖಕ್ಕೆ ಆಂತರಿಕ ಸನ್ನಿವೇಶವೇ ಬೇಕು. ರಹಸ್ಯವನ್ನು ಒಡೆಯಬೇಕೆನ್ನುವ ವಿಜ್ಞಾನದ ದಾರಿಯಲ್ಲಿಯೂ ರಹಸ್ಯವು ಇನ್ನೊಂದು ರೀತಿಯಲ್ಲಿ ಉಳಿದೇ ಬಿಟ್ಟಿತು!  ಅಲ್ಲದೆ, ವಿಜ್ಞಾನಿಗೆ ತಿಳಿದ ಈ ರಹಸ್ಯ, ವಸ್ತುಗಳ ಗ್ರಾಹಕರಾದ ನಾಗರಿಕರಿಗೆ ತಿಳಿದು ಬರುವುದಿಲ್ಲ.  ಅದು ತಿಳಿಯಬೇಕಾದರೆ ಉಚಿತವಾದ ಆಂತರಿಕ ಸನ್ನಿವೇಶವೇ ಬೇಕು.  ವಿಜ್ಞಾನದ ದಾರಿಯನ್ನು ಹೊಗಳಿದ ಮಾತ್ರಕ್ಕೆ ಈ ಆಂತರಿಕ ಸನ್ನಿವೇಶ ಉಂಟಾಗುವುದೂ ಇಲ್ಲ. ತೆಗಳುವುದರಿಂದಲೂ ಉಂಟಾಗುವುದಿಲ್ಲ. ಪದಗಳಿಗೆ ಸ್ಪಂದಿಸುವ ಸೂಕ್ಷ್ಮ ಎಚ್ಚರವೊಂದು ಈ ಆಂತರಿಕ ಸನ್ನಿವೇಶದತ್ತ ನಮ್ಮನ್ನು ಒಯ್ಯಬಹುದು.

■ **ತೋಷ**

## ಮಾತೇ ಮುತ್ತು

★ ನಾನು ಭವಿಷ್ಯದ ಬಗ್ಗೆ ಯೋಚಿಸುವುದಿಲ್ಲ. ಅಷ್ಟರೊಳಗೆ ಅದು ಬಂದಿರುತ್ತದೆ.

–ಆಲ್ಬರ್ಟ್ ಐನ್‌ಸ್ಟೀನ್

★ ಗೆಳೆಯ ಅಂದರೆ ನೀನೇ ಇನ್ನೊಬ್ಬನಾದಂತೆ.

–ಅರಿಸ್ಟಾಟಲ್

★ ವಯಸ್ಸು 20 ಇರಲಿ, 80 ಇರಲಿ; ಕಲಿಯುವುದನ್ನು ನಿಲ್ಲಿಸಿದಾತ ಮುದುಕನಾಗುತ್ತಾನೆ.

–ಮಾರ್ಕ್ ಟ್ವೈನ್

★ ನಿಮ್ಮ ಕೆಲಸಕ್ಕೆ, ಮಾತುಗಳಿಗೆ ಮತ್ತು ಗೆಳೆಯರಿಗೆ ಬದ್ಧರಾಗಿರಿ.

–ಥೋರೊ

★ ಪುರುಷ ಯಾವುದೇ ಮಹಿಳೆಯ ಜತೆಗೆ ಸಂತೋಷವಾಗಿರುತ್ತಾನೆ– ಅವಳನ್ನು ಪ್ರೀತಿಸುವವರೆಗೆ!

–ಆಸ್ಕರ್ ವೈಲ್ಡ್

★ ಯಾವುದೇ ವಸ್ತುವಿನಿಂದ ನಿಮ್ಮ ಆಂತರ್ಯಕ್ಕೆ ಸಹಾಯ ಮತ್ತು ನೆಮ್ಮದಿ ದೊರಕುತ್ತದೋ, ಅಲ್ಲಿಯವರೆಗೆ ಆ ವಸ್ತುವನ್ನು ಇಟ್ಟುಕೊಳ್ಳಿ.

–ಮಹಾತ್ಮಾ ಗಾಂಧಿ

★ ಬೇಸರಕ್ಕೆ ಕುತೂಹಲವೇ ಮದ್ದು. ಕುತೂಹಲಕ್ಕೆ ಮದ್ದಿಲ್ಲ.

–ಡೊರೊತಿ ಪಾರ್ಕರ್

★ ನಾನು ನೋಡದ ಸಂಗತಿಗಳಿಗಾಗಿ ಭಗವಂತನ ಮೇಲೆ ವಿಶ್ವಾಸವಿಡಲು, ನೋಡಿದ ಎಲ್ಲ ಸಂಗತಿಗಳೂ ನೆರವಾಗಿವೆ.

–ಎಮರ್ಸನ್

★ ಎಲ್ಲ ಆಡಳಿತ ಪದ್ಧತಿಗಳನ್ನೂ ಪರೀಕ್ಷಿಸಿ ಆಗಿದಿದೆ. ಇನ್ನು ಉಳಿದಿರುವುದು ಪ್ರಜಾಪ್ರಭುತ್ವ ಮಾತ್ರ. ಅದೇ ಅತ್ಯಂತ ಕೆಟ್ಟ ಆಡಳಿತ ವ್ಯವಸ್ಥೆ.

–ವಿನ್‌ಸ್ಟನ್ ಚರ್ಚಿಲ್

★ ಅಂತಿಮವಾಗಿ ನಾವು ನಮ್ಮ ಶತ್ರುಗಳ ಮಾತುಗಳನ್ನು ನೆನಪಿಟ್ಟುಕೊಂಡಿರುವುದಿಲ್ಲ. ಆದರೆ ಗೆಳೆಯರ ಮೌನವನ್ನು ನೆನಪಿಟ್ಟುಕೊಂಡಿರುತ್ತೇವೆ.

–ಮಾರ್ಟಿನ್ ಲೂಥರ್ ಕಿಂಗ್ ಜೂ.